# ಮಾಸ ಭವಿಷ್ಯ

ಅರುಣ ಪಿ. ಭಟ್



**ಮೇಷ:** ವ್ಯಾಪಾರ ವ್ಯವಹಾರದ ವಿಸ್ತರಣೆ ಸಲುವಾಗಿ ಪ್ರಯಾಣ ಮಾಡಬೇಕಾಗುತ್ತದೆ. ಆರೋಗ್ಯದಲ್ಲಿ ಸಣ್ಣಪುಟ್ಟ ಏರುಪೇರು. ತಿಂಗಳ ಮಧ್ಯ ಭಾಗದಲ್ಲಿ ಔತಣ ಕೂಟ, ಸ್ನೇಹ ಕೂಟಗಳಲ್ಲಿ ಭಾಗವಹಿಸುವ ಸಾಧ್ಯತೆ. ರಾಜಕಾರಣಿಗಳಿಗೆ ಪ್ರಗತಿ. ಶುಭ: 9,12, 22 ಅಶುಭ: 15, 20, 28.

**ವೃಷಭ:** ಕೌಟುಂಬಿಕ ವ್ಯಾಪಾರ ವ್ಯವಹಾರ ನಡೆಸುತ್ತಿರುವವರು ಆ ಬಗ್ಗೆ ಸೋದರ–ಸೋದರಿಯರ ಜತೆ ಚರ್ಚೆ ನಡೆಸಲಿದ್ದೀರಿ. ಸಾಮಾಜಿಕ, ರಾಜಕೀಯದ ಬದುಕು ವೃದ್ಧಿ. ತಿಂಗಳ ಮಧ್ಯಭಾಗದಲ್ಲಿ ಉದ್ಯೋಗಸ್ಥರಿಗೆ ಪ್ರಗತಿ, ತಿಂಗಳ ಅಂತ್ಯಕ್ಕೆ ಆದಾಯ ಉತ್ತಮ ಶುಭ: 10, 14, 29 ಅಶುಭ: 12, 16, 27.





**ಮಿಥುನ:** ವಿವೇಚನೆಯಿಂದ ಕಾರ್ಯಗಳಲ್ಲಿ ಪಾಲ್ಗೊಳ್ಳಿ. ಕೆಲವರ ಮಾತನ್ನು ನಂಬಿ ನಷ್ಟದ ವ್ಯವಹಾರದಲ್ಲಿ ಪಾಲ್ಗೊಳ್ಳುವ ಸಾಧ್ಯತೆ ಇದೆ– ಎಚ್ಚರವಿರಲಿ. ಸಹೋದರ ವಿಶ್ವಾಸವನ್ನು ಪಡೆಯಲು ಪ್ರಯತ್ನಿಸುವುದು ಸೂಕ್ತ. ಬಹುಕಾಲದ ವ್ಯಾಜ್ಯಗಳಿಗೆ ಸೂಕ್ತ ಪರಿಹಾರ ದೊರಕಲಿದೆ. ಶುಭ: 10, 14, 26 ಅಶುಭ: 13, 18, 25.

**ಕರ್ಕ:** ನಿರುದ್ಯೋಗಿಗಳಿಗೆ ಉದ್ಯೋಗದ ಅವಕಾಶಗಳು ಕಂಡುಬರಲಿವೆ. ಹಣಕಾಸು ವ್ಯವಹಾರಗಳು ಯೋಜಿತವಾಗಿ ನಡೆಯಲಿದೆ. ಕುಟುಂಬದಲ್ಲಿ ಶುಭಸುದ್ದಿ ಬರಲಿದೆ. ಅವಿವಾಹಿತರಿಗೆ ವಿವಾಹದ ಯೋಗ ಸಾಧ್ಯತೆ. ವೈಯಕ್ತಿಕ ಜೀವನದಲ್ಲಿ ಭಿನ್ನಾಭಿಪ್ರಾಯ. ಶುಭ: 12, 16, 18 ಅಶುಭ: 11, 19, 22.





**ಸಿಂಹ:** ಆತ್ಮೀಯ ವ್ಯಕ್ತಿಗಳೊಡನೆ ವಿವಾದ ಹೆಚ್ಚಾಗಬಹುದು. ಅನಗತ್ಯವಾಗಿ ಮಾತಿನಲ್ಲಿ ಏನಾದರೂ ಹೇಳಿ ಸಿಲುಕಬೇಡಿ. ಒತ್ತಡಭರಿತ ವಿಚಾರಗಳಿಂದ ಖಿನ್ನತೆ. ಇತರ ಸ್ಥಳದಲ್ಲಿ ನಡೆಯುತ್ತಿರುವ ಕೆಲಸಗಳನ್ನು ನಿರ್ವಹಿಸಲು ನಿಯೋಜನೆ ಸಾಧ್ಯತೆ. ಶುಭ: 9, 18, 26.ಅಶುಭ: 11, 21, 29.

**ಕನ್ಯಾ:** ಯೋಜಿತ ಕಾರ್ಯಗಳಲ್ಲಿ ವ್ಯವಸ್ಥಿತವಾದ ಕಾರ್ಯಶೈಲಿ ಕಂಡುಬರುತ್ತದೆ. ಧನಾಗಮನ ವ್ಯವಸ್ಥೆ ಸರಾಗ. ಲೇವಾದೇವಿ ವ್ಯವಹಾರಗಳಿಂದ ದೂರವಿರುವುದು ಲೇಸು. ಕುಟುಂಬದ ಜೊತೆಗೆ ಹೆಚ್ಚಿನ ಕಾಲ ಕಳೆಯಲಿದ್ದೀರಿ. ಪ್ರೀತಿಪಾತ್ರರಿಂದ ಉಡುಗೊರೆ ಸಾಧ್ಯತೆ. ಶುಭ: 10, 18, 24 ಅಶುಭ: 11, 19, 27.





**ತುಲಾ:** ವೈಯಕ್ತಿಕ ವಿಚಾರಗಳನ್ನು ಯಾರೊಂದಿಗೂ ಹಂಚಿಕೊಳ್ಳಬೇಡಿ. ಪತ್ನಿಯ ವಿಚಾರಗಳಿಗೆ ಸಹಮತ ನೀಡಿ. ಬರುವ ಆದಾಯದ ಮೂಲಕವೇ ಕೆಲವು ಸಲಕರಣೆ ಖರೀದಿ ಸಾಧ್ಯತೆ. ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರಗತಿ. ತಿಂಗಳ ಮಧ್ಯ ಭಾಗದಲ್ಲಿ ಆರೋಗ್ಯದಲ್ಲಿ ಸಮಸ್ಯೆ. ಶುಭ: 10, 18, 28 ಅಶುಭ: 12, 19. 26

**ವೃಶ್ಚಿಕ:** ನಿಮ್ಮ ಕೆಲಸಗಳಿಗೆ ವೇಗ ನೀಡುತ್ತೀರಿ. ನಿಮ್ಮ ಕಾರ್ಯ ಯೋಜನೆಗಳನ್ನು ಅಂತಿಮಗೊಳಿಸಲು ಅಧಿಕಾರಿಗಳ ನೆರವು ದೊರೆಯುತ್ತದೆ. ವೈವಾಹಿಕ ಜೀವನವು ಸಂತಸದಾಯಕ. ಸ್ವಾವಲಂಬನೆಯ ಚಿಂತನೆ ಮೂರ್ತಸ್ವರೂಪ ಪಡೆಯಲಿದೆ. ಶುಭ: 9, 19, 29\ಅಶುಭ: 11, 15, 22.





**ಧನು:** ಮಾನಸಿಕ ಕ್ಲೇಶಗಳು ನಿಮ್ಮ ಅಭಿವೃದ್ಧಿಗೆ ಮಾರಕವಾಗಬಹುದು. ಕುಟುಂಬದಲ್ಲಿ ಅಶಾಂತಿಯ ವಾತಾವರಣ. ಆರೋಗ್ಯದಲ್ಲಿ ವ್ಯತ್ಯಾಸ ಕಾಣಬಹುದು. ಕೌಟುಂಬಿಕ ಜೀವನದಲ್ಲಿ ಜವಾಬ್ದಾರಿ ಹೆಚ್ಚಳ. ಶುಭ: 12, 16, 29 ಅಶುಭ: 10, 17, 26.

**ಮಕರ:** ಉದ್ಯೋಗದಲ್ಲಿ ಉತ್ತಮ ಸ್ಥಾನಮಾನ ಸಿಗಲಿದೆ. ಸಹವರ್ತಿಗಳು ನಿಮ್ಮ ಯೋಜನೆಗಳಿಗೆ ಬೆಂಬಲ ನೀಡಲಿದ್ದಾರೆ. ಸಾಹಿತ್ಯ ಚಟುವಟಿಕೆಗಳಲ್ಲಿ ಮನ್ನಣೆ. ಸಂಗಾತಿ ಜತೆಗೆ ಬಾಂಧವ್ಯ ಗಟ್ಟಿಯಾಗಲಿದೆ. ಉದ್ಯೋಗ ಸ್ಥಳದಲ್ಲಿ ಯಶಸ್ಸು. ಶುಭ; 13, 19, 28 ಅಶುಭ: 11, 17, 26.





**ಕುಂಭ:** ಅಪರಿಚಿತ ವ್ಯಕ್ತಿಗಳಿಂದ ನಿಮ್ಮ ಯೋಜನೆಗಳಲ್ಲಿ ನಷ್ಟ, ನಂಬಿಕೆ ದ್ರೋಹ. ವಾಹನದಲ್ಲಿ ಜಾಗ್ರತೆ ವಹಿಸುವುದು ಸೂಕ್ತ. ಹಣಕಾಸಿನ ವೆಚ್ಚ ಹೆಚ್ಚಳ. ವೃತ್ತಿಗೆ ಸಂಬಂಧಿಸಿದಂತೆ ಯಾವುದೇ ವಿಚಾರದಲ್ಲಿ ನಿರ್ಲಕ್ಷ್ಯ ಮಾಡಬೇಡಿ. ಶ್ರಮಕ್ಕೆ ಅತ್ಯುತ್ತಮ ಫಲ ಸಿಗಲಿದೆ. ಶುಭ: 9, 14, 26 ಅಶುಭ: 11, 15, 27.

**ಮೀನ:** ಆರ್ಥಿಕ ಯೋಜನೆಗಳ ಫಲಿತಾಂಶ ವಿಳಂಬವಾಗುವ ಸಾಧ್ಯತೆ ಇದೆ. ಒಳ್ಳೆ ಕೆಲಸಕ್ಕೆ ಮೆಚ್ಚುಗೆ, ಮನ್ನಣೆ, ಪುರಸ್ಕಾರಗಳು ಲಭಿಸಲಿವೆ. ನಿಮ್ಮ ಯಶಸ್ಸು ಕಂಡು ಪೋಷಕರು ಸಂತೋಷ ಪಡುತ್ತಾರೆ. ಆರ್ಥಿಕವಾಗಿ ಲಾಭ ಆಗಲಿದೆ. ಶುಭ: 6, 14, 22 ಅಶುಭ: 12, 18, 29.

